**DW-3:** ಗೋವಿಂದಪ್ಪ

ದಿನಾಂಕಃ **03.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 6, 11 ಮತ್ತು 12 ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಸ್.ಆರ್.ವಿ. ವಕೀಲರಿಂದ**

1. ಭೀಮಪ್ಪ ರವರ ಮಗ ವೆಂಕಟರಮಣಪ್ಪ ರವರಿಗೆ ಯಂಗಪ್ಪ, ಗುರ್ರಪ್ಪ ಮತ್ತು ಸುಬ್ಬಮ್ಮ ಎಂಬ ಮಕ್ಕಳು ಎಂದರೆ ಸರಿ. ಸುಬ್ಬಮ್ಮ ರವರನ್ನು ಬಂಡಮಿಂದಪಲ್ಲಿ ಗ್ರಾಮದ ರಾಮಯ್ಯ ರವರಿಗೆ ಕೊಟ್ಟು ವಿವಾಹ ಮಾಡಲಾಗಿದೆ ಎಂದರೆ ಸರಿ. ನನ್ನ ದೊಡ್ಡಪ್ಪ ಅಕ್ಕಲಪ್ಪ ರವರ ಹೆಂಡತಿ ಗಂಗಮ್ಮ ಎಂದರೆ ಸರಿ. ಗಂಗಮ್ಮ ರವರ ಅಣ್ಣ ಮೇಲ್ಕಂಡ ಬಂಡಮಿಂದಪಲ್ಲಿ ಗ್ರಾಮದ ರಾಮಯ್ಯ ರವರು ಎಂದರೆ ಸರಿ. ರಾಮಯ್ಯ ಮತ್ತು ಸುಬ್ಬಮ್ಮ ರವರ ಮಗಳೇ ಜಯಮ್ಮ ಎಂದರೆ ಸರಿ. ಜಯಮ್ಮ ರವರು ಈ ದಾವೆಯ 3 ನೇ ಪ್ರತಿವಾದಿ ನಾರಾಯಣಪ್ಪ ರವರ ಹೆಂಡತಿ ಎಂದರೆ ಸರಿ. ಭೀಮಪ್ಪ ರವರ 2 ನೇ ಮಗ ಚಿನ್ನಪ್ಪ ರವರ ಮಕ್ಕಳು ಗುರ್ರಪ್ಪ, ಸುಬ್ಬಯ್ಯ ಮತ್ತು ಭೀಮಪ್ಪ ಎಂದರೆ ಸರಿ. ಗುರ್ರಪ್ಪ ರವರಿಗೆ ಶಂಕರಪ್ಪ ಮತ್ತು ಚಿನ್ನಪ್ಪ ಎಂಬ ಮಕ್ಕಳು ಎಂದರೆ ಸರಿ. ಸುಬ್ಬಯ್ಯ ರವರಿಗೆ ರಾಮಾಂಜಿ ಮತ್ತು ಶ್ರೀನಿವಾಸ ಮಕ್ಕಳು ಎಂದರೆ ಸರಿ. ಭೀಮಪ್ಪ ರವರಿಗೆ ಪ್ರಭಾಕರ ಮತ್ತು ಪ್ರಸನ್ನ ಕುಮಾರ್ ಎಂಬ ಮಕ್ಕಳು ಎಂದರೆ ಸರಿ. ಭೀಮಪ್ಪ ರವರ 3 ನೇ ಮಗ ರಾಮಪ್ಪ ರವರಿಗೆ ವೆಂಕಟರಮಣಪ್ಪ ಎಂಬ ಒಬ್ಬನೇ ಮಗ ಎಂದರೆ ಸರಿ. ಭೀಮಪ್ಪ ರವರಿ 4 ನೇ ಮಗ ಚೆನ್ನಪ್ಪ ರವರು ಜೀವಂತ ಇರುವುದಿಲ್ಲ ಹಾಗೂ ಯಾವುದೇ ಸಂತತಿ ಇರುವುದಿಲ್ಲ.

2. ಗಂಗಮ್ಮ ರವರು ನಾರಾಯಣಪ್ಪ ರವರಿಗೆ ಊಯಿಲು ಬರೆದಾಗ ನಾನು ಹಾಜರಿದ್ದೆ. ನಾನು ಪತ್ರಕ್ಕೆ ಸಹಿ ಮಾಡಿರುತ್ತೇನೆ. 1970 ರಲ್ಲಿ ಊಯಿಲು ಬರೆಯಲಾಗಿದೆ. ಸದರಿ ಊಯಿಲನ್ನು ತಾಲ್ಲೂಕು ಕಛೇರಿಯಲ್ಲಿ ಬರೆಯಲಾಗಿದೆ. ಊಯಿಲು ಬರೆದಾಗ ರಾಮರೆಡ್ಡಿ, 3 ನೇ ಪ್ರತಿವಾದಿ

ನಾರಾಯಣಪ್ಪ ಮತ್ತು ಗಂಗಮ್ಮ ರವರು ಇದ್ದರು. ನಾರಾಯಣಪ್ಪ ರವರನ್ನು ಗಂಗಮ್ಮ ರವರು ದತ್ತು ಸ್ವೀಕಾರ ಮಾಡಿದ ಬಗ್ಗೆ ಪತ್ರದಲ್ಲಿ ಬರೆಯಲಾಗಿದೆ. ನಮ್ಮ ಗ್ರಾಮದಲ್ಲಿ ದತ್ತು ಸ್ವೀಕಾರದ ಬಗ್ಗೆ ದೇವರ ಪೂಜೆ ಮಾಡಿರುತ್ತಾರೆ. ಅಣ್ಣ-ತಮ್ಮಂದಿರು, ನಮ್ಮ ತಂದೆ ಗುರ್‍ರಪ್ಪ, ನಮ್ಮ ತಾಯಿ ಗಂಗಮ್ಮ ಮತ್ತು ಯರ್ಾಪ್ಪೆ ರಾಮರೆಡ್ಡಿ ರವರು ಹಾಜರಿದ್ದರು. ದೇವರ ಪೂಜೆ ಮಾಡಿ ನಿಮ್ಮ ಮಗನೆಂದು ಕಳುಹಿಸಿರುತ್ತಾರೆ. ತಂದೆಯ ಭಾಗದಲ್ಲಿ ನಾರಾಯಣಪ್ಪ ರವರಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ನಾನು, ನಾರಾಯಣಪ್ಪ, ಭೀಮಪ್ಪ ರವರ ಮಗ ವೆಂಕಟರವಣಪ್ಪ, ಸುಬ್ಬಮ್ಮ ಮತ್ತು ರಾಮಾಂಜಿನಪ್ಪ ಎಲ್ಲರೂ ಸೇರಿ ವಿಲ್ ನಾಮೆಯನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಿಲ್ ನಾಮೆಯಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಗಂಗಮ್ಮ ರವರದ್ದು ಅಲ್ಲ ಎಂದರೆ ಸರಿಯಲ್ಲ. ಗಂಗಮ್ಮ ಎಂದೂ ಸಹಾ ನಾರಾಯಣಪ್ಪ ರವರನ್ನು ದತ್ತು ಸ್ವೀಕಾರ ಮಾಡಿಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣಪ್ಪ, ಅಕ್ಕಲಪ್ಪ ಮತ್ತು ಗಂಗಮ್ಮ ರವರ ಮಗ ಎಂದು ತೋರಿಸಲು ಊಯಿಲು ನಾಮೆಯನ್ನು ಹಾಜರುಪಡಿಸಿರುತ್ತೇನೆ. ಆತ ಇಂತಹವರದ್ದೇ ಮಗ ಎಂದು ತೋರಿಸಲು ದಾಖಲೆ ಇರುವುದಿಲ್ಲ.

3. ಅವರು ಅಕ್ಕಲಪ್ಪ ಮತ್ತು ಗಂಗಮ್ಮ ರವರ ದತ್ತುಪುತ್ರ ಅಲ್ಲ ಎಂದರೆ ಸರಿಯಲ್ಲ. ಅಕ್ಕಲಪ್ಪ ಮತ್ತು ಗಂಗಮ್ಮ ರವರು ಸಂತತಿ ಇಲ್ಲದೇ ಮೃತಪಟ್ಟಿದ್ದು ಅವರ ಸ್ವತ್ತುಗಳು ಗುರ್‍ರಪ್ಪ ರವರ ವಾರಸುದಾರರಿಗೆ ಸೇರಿದ್ದಾಗಿರುತ್ತವೆ ಎಂದರೆ ಸರಿಯಲ್ಲ. ನಾರಾಯಣಪ್ಪ ಗುರ್‍ರಪ್ಪ ರವರ ಮಗ ಎಂಬುದು ನಿಜ. ಈ ದಾವೆಯಲ್ಲಿಯೂ ಸಹಾ ನಾರಾಯಣಪ್ಪ ಗುರ್‍ರಪ್ಪ ರವರ ಮಗ ಎಂದು ಬರೆಯಲಾಗಿದೆ ಎಂದರೆ ಸರಿ. ನಾರಾಯಣಪ್ಪ, ಅಕ್ಕಲಪ್ಪ ಮತ್ತು ಗಂಗಮ್ಮ ರವರ ಮಗ ಎಂದು ತೋರಿಸಲು ಯಾವುದೇ ಕಛೇರಿಯಲ್ಲಿಯೂ ಸಹಾ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಭೀಮಪ್ಪ ರವರ ಮಗ ರಾಮಯ್ಯ, ರಾಮಯ್ಯ ರವರ ಮಗ ವೆಂಕಟರಮಣಪ್ಪ ರವರು ಸ.ನಂ. 25/2 ರಲ್ಲಿ ಮಲ್ಲಯ್ಯ ರವರ ಮಗ ಗಂಗಣ್ಣ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸ.ನಂ. 30/1 ಮತ್ತು 40/2 ರಲ್ಲಿ ಭೀಮಯ್ಯ ರವರ ಮಗ ರಾಮಯ್ಯ, ರಾಮಯ್ಯ ರವರ ಮಗ

ವೆಂಕಟರವಣಪ್ಪ ರವರು ಚಿನ್ನಯ್ಯ ರವರ ಮಗ ಗುರ‍್ರಪ್ಪ, ಸುಬ್ಬಯ್ಯ ಮತ್ತು ಭೀಮಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ರಾಮಯ್ಯ ಮತ್ತು ವೆಂಕಟರಮಣಪ್ಪ ರವರು ಮಂಗಮ್ಮ ಬಿನ್ ರಾಮಯ್ಯ ರವರಿಗೆ ಸ.ನಂ. 47 ರ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಗುರ‍್ರಪ್ಪ ರವರ ಮಗ ಶಂಕರಪ್ಪ ರವರ ಹೆಸರಿಗೆ ಸ.ನಂ. 55 ರಲ್ಲಿ ಪಹಣಿ ನಮೂದಾಗಿದೆ. ಸ.ನಂ. 139 ರಲ್ಲಿ ಚಿನ್ನಯ್ಯರವರ ಮಕ್ಕಳು ಗುರ‍್ರಪ್ಪ, ಸುಬ್ಬಯ್ಯ ಮತ್ತು ಭೀಮಪ್ಪ ರವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿ. ಸ.ನಂ. 25/2 ಮತ್ತು 30/1 ರ ಸ್ವತ್ತಿಗೆ ಸಂಬಂಧಿಸಿದಂತೆ ಚಿನ್ನಯ್ಯ ರವರ ಮಗ ಸುಬ್ಬಯ್ಯ ರವರ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸರಿ. ಅದರಲ್ಲಿ ಚಿನ್ನಪ್ಪ ರವರ ಮಕ್ಕಳು ಗುರ‍್ರಪ್ಪ, ಸುಬ್ಬಯ್ಯ ಮತ್ತು ಭೀಮಪ್ಪ ರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ.

4. ಗಂಗಮ್ಮ ಮತ್ತು ಅಕ್ಕಲಪ್ಪ ರವರ ಭಾಗದ ಸ್ವತ್ತಿಗೆ ಗುರ‍್ರಪ್ಪ ರವರ ಮಕ್ಕಳು ವಾರಸುದಾರರ ಎಂದರೆ ಸರಿಯಲ್ಲ. ನಾರಾಯಣಪ್ಪ ರವರು ಇಂದೂ ಸಹಾ ಅಕ್ಕಲಪ್ಪ ಮತ್ತು ಗಂಗಮ್ಮ ರವರ ಸ್ವತ್ತಿನಲ್ಲಿ ಸ್ವಾಧೀನ ಇರುವುದಿಲ್ಲ ಮತ್ತು ಎಲ್ಲರೂ ಒಟ್ಟಿಗೆ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಮೇಲ್ಕಂಡ ಸ್ವತ್ತುಗಳಲ್ಲಿ ಗುರ‍್ರಪ್ಪ ರವರ ಮಕ್ಕಳು ಹೆಸರುಗಳು ಸಹಾ ಬರುತ್ತಿವೆ ಎಂದರೆ ಸರಿ. ಮೇಲ್ಕಂಡ ಸ.ನಂ. 55, 51, 139, 47, 30/1 ಮತ್ತು 25 ರ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನವಿದ್ದಾರೆ ಎಂದರೆ ಸರಿ. ನಾನು ರಾಮಾಂಜಿನಪ್ಪ ಮತ್ತು ನಾರಾಯಣಪ್ಪ ರವರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.